# ಭಾರತ್ ಟ್ಯಾಕ್ಸಿ ಸಹಕಾರಿ ಸಾರಥಿ

भारत · TAXI
DRIVER


**ಆ್ಯಪ್ ಆಧರಿತ ಖಾಸಗಿ ಟ್ಯಾಕ್ಸಿ ಸೇವಾ ಕಂಪನಿಗಳಿಗೆ ಸಡ್ಡು ಹೊಡೆಯಲು ಸಹಕಾರಿ ತತ್ವದೊಂದಿಗೆ 'ಭಾರತ್ ಟ್ಯಾಕ್ಸಿ' ಬರುತ್ತಿದೆ. ಟ್ಯಾಕ್ಸಿ ಏರಲು ಎಲ್ಲರೂ ಸಿದ್ಧರಾಗಿ.**

**■ ಶಶಿಕುಮಾರ್ ಸಿ.**

ಟ್ಯಾಕ್ಸಿ ಚಾಲನೆಯಿಂದಲೇ ಬದುಕು ಕಟ್ಟಿಕೊಂಡ ಅದೆಷ್ಟೊ ಚಾಲಕರಿಗೆ ಹೊಸ ವರ್ಷಾರಂಭದಲ್ಲೇ ಸಿಹಿಸುದ್ದಿಯೊಂದು ಕಾದಿದೆ. ಈ ಸುದ್ದಿಯಲ್ಲಿ ಸಹಕಾರಿ ತತ್ವ ಅಡಗಿದೆ, ಚಾಲಕರ ಹಿತದೃಷ್ಟಿ ಇದೆ, ಮಿಗಿಲಾಗಿ ಚಾಲಕರ ದುಡಿಮೆ ಹಣವನ್ನು ಸಂಪೂರ್ಣವಾಗಿ ಅವರ ಜೇಬಿಗೇ ತಲುಪಿಸುವ ನೈತಿಕ ಹೊಣೆಗಾರಿಕೆಯಿದೆ. ಇಷ್ಟೊಂದೆಲ್ಲ ಸಿಹಿಹೂರಣ ತುಂಬಿರುವ ಸುದ್ದಿಯಾದರೂ ಏನು ಅಂತ ಗೊತ್ತಾ? ಅದುವೇ ಸಹಕಾರಿ ತತ್ವದೊಂದಿಗೆ ಬರುತ್ತಿರುವ 'ಭಾರತ್ ಟ್ಯಾಕ್ಸಿ'.

ಇದು ಬರೀ ಟ್ಯಾಕ್ಸಿ ಅಲ್ಲ. ಚಾಲಕರ ಅಭ್ಯುದಯದ ಸಾರಥಿ. ಇಲ್ಲಿ ಕಮಿಷನ್ ಇಲ್ಲ, ತಾರತಮ್ಯ ಇಲ್ಲ, ದುಬಾರಿ ಬಾಡಿಗೆಯಂತೂ ಇಲ್ಲವೇ ಇಲ್ಲ. ಇಲ್ಲಿರುವುದು ವಿಶ್ವಾಸಾರ್ಹ, ಪಾರದರ್ಶಕತೆ, ಗ್ರಾಹಕರಿಗೆ ಕೈಗೆಟುಕುವ ಹಾಗೂ ಚಾಲಕರಿಗೆ ಹೊರೆಯಾಗದ ಹೊಣೆಗಾರಿಕೆ. ಸಹಕಾರಿ ತತ್ವವೇ ಈ ಟ್ಯಾಕ್ಸಿಯ ಇಂಧನ. ಕೇಂದ್ರ ಸರ್ಕಾರದ ಗೃಹ ಮಂತ್ರಿ, ಸಹಕಾರ ಸಚಿವ ಅಮಿತ್ ಶಾ, ಈ ಹಿಂದೆ ಸಹಕಾರಿ ಕ್ಯಾಬ್ ಸೇವೆ ಪ್ರಾರಂಭಿಸುವ ಬಗ್ಗೆ ಹೇಳಿದ್ದರು. ಅದೀಗ ಅಂತಿಮ ರೂಪಕ್ಕೆ ಬಂದಿದ್ದು, 2026ರಲ್ಲಿ ದೇಶದಾದ್ಯಂತ ಸೇವೆ ಒದಗಿಸಲು ಸಜ್ಜಾಗಿದೆ.

ಭಾರತ್ ಟ್ಯಾಕ್ಸಿಯು ಭಾರತದ ಮೊದಲ ಚಾಲಕ ಮಾಲೀಕತ್ವದ ಸಹಕಾರಿ ಅಪ್ಲಿಕೇಷನ್. ಇದು ಖಾಸಗಿ ಕಂಪನಿಗಳ ಮೇಲಿನ ಅವಲಂಬನೆಯಿಂದ ಚಾಲಕರನ್ನು ಮುಕ್ತಗೊಳಿಸುವ ಹಾಗೂ ಪ್ರಯಾಣಿಕರ ಸುಲಿಗೆಯನ್ನು ತಪ್ಪಿಸುತ್ತದೆ. ಸಹಕಾರ್ ಟ್ಯಾಕ್ಸಿ ಕೋ–ಆಪರೇಟಿವ್ ಲಿಮಿಟೆಡ್ ಇದನ್ನು ನಿರ್ವಹಿಸಲಿದೆ. ಓಲಾ, ಉಬರ್ ಮತ್ತು ರ್‍ಯಾಪಿಡೊದಂತಹ ಖಾಸಗಿ ಕ್ಯಾಬ್ ಕಂಪನಿಗಳಿಗೆ ಪ್ರತಿಸ್ಪರ್ಧಿಯಾಗಿ ಹಾಗೂ ಚಾಲಕ–ಸಾರ್ವಜನಿಕರ ಹಿತದೃಷ್ಟಿಯಿಂದ ಈ ಯೋಜನೆ ರೂಪಿಸಲಾಗಿದೆ. ದೇಶದ ಚಾಲಕರು ಈ ಆ್ಯಪ್ ಅಡಿ ನೋಂದಣಿ ಮಾಡಿಕೊಂಡು ಸಾರಥಿಯಾಗಬಹುದು.




ಭಾರತ್ ಟ್ಯಾಕ್ಸಿ ಕ್ಯಾಬ್ ಸೇವೆಯ ಚಾಲಕರನ್ನು 'ಸಾರಥಿ' ಎಂದೇ ಗುರುತಿಸುತ್ತದೆ. ಕೇಂದ್ರ ಸಹಕಾರ ಸಚಿವಾಲಯ ಮತ್ತು ರಾಷ್ಟ್ರೀಯ ಇ–ಆಡಳಿತ ವಿಭಾಗವು (NeGD) ಆ್ಯಪ್ ಅಭಿವೃದ್ಧಿಪಡಿಸಿವೆ. ನಿರ್ವಹಣೆ ಸಹಕಾರ್ ಟ್ಯಾಕ್ಸಿ ಕೋ–ಆಪರೇಟಿವ್ ಲಿಮಿಟೆಡ್‌ನದ್ದು. ಸದ್ಯದ ಮಟ್ಟಿಗೆ ಅಮುಲ್‌ನ ವ್ಯವಸ್ಥಾಪಕ ನಿರ್ದೇಶಕ ಜಯೆನ್ ಮೆಹ್ತಾ ಇಡೀ ಯೋಜನೆಯ ಉಸ್ತುವಾರಿ.

ಗೂಗಲ್ ಪ್ಲೇ ಸ್ಟೋರ್ ಹಾಗೂ ಆ್ಯಪಲ್ ಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್‌ನಲ್ಲಿ ಸದ್ಯ ಹಿಂದಿ, ಇಂಗ್ಲಿಷ್, ಗುಜರಾತಿ ಮತ್ತು ಮರಾಠಿ ಭಾಷೆಗಳ ಸೇವೆಯಿದೆ. ಭವಿಷ್ಯದಲ್ಲಿ ಇತರ ಭಾಷೆಗಳಲ್ಲೂ ಇದು ಲಭ್ಯವಾಗಲಿದೆ. ಪ್ರಯಾಣಿಕರು ಭಾರತ್ ಟ್ಯಾಕ್ಸಿ, ಚಾಲಕರು ಭಾರತ್ ಟ್ಯಾಕ್ಸಿ ಡ್ರೈವರ್ ಆ್ಯಪ್ ಬಳಸಬೇಕು.

### ಟ್ಯಾಕ್ಸಿಯೂ; ಸಹಕಾರಿ ತತ್ವವೂ

ನೋಂದಣಿಯಿಂದ ಮತ್ತು ಇತರ ಮೂಲಗಳಿಂದ ಬರುವ ಆದಾಯವನ್ನು ಎಲ್ಲ 'ಸಾರಥಿ'ಗಳಿಗೆ ಸಮನಾಗಿ ಹಂಚುವ ನಿಲುವನ್ನು ಭಾರತ್ ಟ್ಯಾಕ್ಸಿ ಹೊಂದಿದೆ. ಹೀಗಾಗಿ, ಈ ಆ್ಯಪ್ ಸಹಕಾರಿ ತತ್ವಕ್ಕೆ ಬದ್ಧವಾಗಿ ಕಾರ್ಯನಿರ್ವಹಿಸಲಿದೆ. ಜೊತೆಗೆ ವೇದಿಕೆಯಿಂದ ಉತ್ಪತ್ತಿಯಾಗುವ ಸಂಪೂರ್ಣ ಲಾಭವು ಟ್ಯಾಕ್ಸಿ ಚಾಲಕರಿಗೆ ತಲುಪಿಸುತ್ತದೆ. ಓಲಾ, ಉಬರ್ ಹಾಗೂ ರ್‍ಯಾಪಿಡೊದಂತಹ ಕಂಪನಿಗಳು ಪ್ರತಿ ಬಾಡಿಗೆಯ ಆದಾಯದಲ್ಲಿ ಇಂತಿಷ್ಟು (ಹೆಚ್ಚಾಗಿಯೇ) ಕಮಿಷನ್ ಪಡೆಯುತ್ತವೆ. ಉಳಿದ ಹಣವಷ್ಟೇ ಚಾಲಕರ ಜೇಬು ಸೇರುತ್ತದೆ.

'ಸರ್ಜ್ ಪ್ರೈಸಿಂಗ್' ಇಲ್ಲದೆ ಸ್ಥಿರ ದರ ನೀತಿ ಹೊಂದಿರುವ ಈ ಆ್ಯಪ್, ಜನಸಂದಣಿ ಇರುವ ಸಮಯ, ರಜಾದಿನಗಳು ಅಥವಾ ಹವಾಮಾನ ವೈಪರೀತ್ಯಗಳ ಸಂದರ್ಭಗಳಲ್ಲೂ ಒಂದೇ ಮಾದರಿಯ ದರ ನೀತಿ ಹೊಂದಿರಲಿದೆ. ಅಂದರೆ ಖಾಸಗಿ ಕ್ಯಾಬ್ ಕಂಪನಿಗಳು ಪೀಕ್ ಅವರ್‌ನಲ್ಲಿ ಹೆಚ್ಚು ಬಾಡಿಗೆ ಪಡೆಯುತ್ತಿವೆ. ಎಲ್ಲ ಸಮಯದಲ್ಲೂ ಭಾರತ್ ಟ್ಯಾಕ್ಸಿಯಲ್ಲಿ ಬಾಡಿಗೆ ದರವು ಒಂದೇ ರೀತಿ ಇರುತ್ತದೆ. ನೋಂದಣಿ ವೇಳೆ ಒಮ್ಮೆ ಸದಸ್ಯತ್ವ ಶುಲ್ಕ ಪಾವತಿಸಬೇಕು. ಸರಳ ಬುಕಿಂಗ್ ಪ್ರಕ್ರಿಯೆ, ಸ್ಪಷ್ಟ ದರ ಮಾಹಿತಿ, ವಾಹನದ ಲೈವ್ ಟ್ರ್ಯಾಕಿಂಗ್ ಫೀಚರ್ ಹೊಂದಿರುವ ಈ ಆ್ಯಪ್, 24/7 ಗ್ರಾಹಕ ಸೇವೆಗೆ ಸಿದ್ಧವಿರಲಿದೆ. ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆಗಳನ್ನು ನೀಡಲಿದೆ.

### ದೆಹಲಿಯಲ್ಲಿ ಪ್ರಾಯೋಗಿಕ ಪರೀಕ್ಷೆ

ರಾಷ್ಟ್ರ ರಾಜಧಾನಿಯಲ್ಲಿ ಭಾರತ್ ಟ್ಯಾಕ್ಸಿ ಯೋಜನೆ ಪ್ರಾರಂಭವಾಗಿದೆ. ಮೊದಲ ಹಂತದಲ್ಲಿ ಸುಮಾರು 650 ಟ್ಯಾಕ್ಸಿಗಳನ್ನು ಸೇರಿಸಲಾಗಿದೆ. ಕ್ರಮೇಣ ಹೆಚ್ಚಾಗಿದೆ. ದೇಶದ ಇತರ ಪ್ರಮುಖ ನಗರಗಳಿಗೂ ವಿಸ್ತಾರಗೊಳ್ಳಲಿರುವ ಈ ಸೇವೆಯಲ್ಲೀಗ ಮಹಿಳೆಯರು ಸೇರಿದಂತೆ ಸುಮಾರು 5,000 ಸಾರಥಿಗಳು ಭಾಗಿಯಾಗಿದ್ದಾರೆ. ಮಾರ್ಚ್ 2026ರ ವೇಳೆಗೆ ಎಲ್ಲಾ ಪ್ರಮುಖ ನಗರಗಳಲ್ಲಿ ಇದನ್ನು ಪ್ರಾರಂಭಿಸಲು ಸರ್ಕಾರ ಯೋಜಿಸಿದ್ದು, 2030ರ ವೇಳೆಗೆ ಜಿಲ್ಲಾ, ತಾಲ್ಲೂಕು ಮಟ್ಟಕ್ಕೆ ವಿಸ್ತಾರಗೊಳ್ಳಲಿದೆ.

ಕಾರುಗಳು, ಆಟೋಗಳು ಮತ್ತು ಬೈಕ್‌ಗಳ ಟ್ಯಾಕ್ಸಿ ಸೇವೆ ಒದಗಿಸಲು ನವದೆಹಲಿ ಮತ್ತು ಗುಜರಾತ್‌ನ ಸೌರಾಷ್ಟ್ರದಲ್ಲಿ 51,000ಕ್ಕೂ ಹೆಚ್ಚು ಚಾಲಕರು ನೋಂದಾಯಿಸಿಕೊಂಡಿದ್ದಾರೆ. ಅಷ್ಟೂ ಮಂದಿಗೆ ಇನ್ನೂ ಅನುಮತಿ ನೀಡಿಲ್ಲ. ಪ್ರಯಾಣಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಆ್ಯಪ್ ಬಳಸತೊಡಗಿದ್ದಾರೆ. ಯಶಸ್ವಿಯಾದಲ್ಲಿ ಇದು ವಿಶ್ವದ ಅತಿದೊಡ್ಡ ಚಾಲಕ ಮಾಲೀಕತ್ವದ ಮೊಬಿಲಿಟಿ ನೆಟ್‌ವರ್ಕ್ ಆಗಲಿದೆ. ■